<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 27.07.2026</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ. **RM** ವಕೀಲರಿಂದಃ</u>

1. ನಾನು ಪತ್ರಬರಹಗಾರ ಹಾಗೂ ವಕೀಲ ಕೂಡ ಆಗಿದ್ದೇನೆ. ನಾನು, ನನ್ನ ಮುಖ್ಯ ವಿಚಾರಣೆಯಲ್ಲಿ ವಕೀಲ ಎಂದು ಬರೆಸಲು ತೊಂದರೆ ಇಲ್ಲ. ನಾನು ಪತ್ರಬರಹರಗಾರ ಪರವಾನಿಗೆಯನ್ನು ಹೊಂದಿದ್ದೆ ಆದರೆ ಅದನ್ನು ಸರಕಾರಕ್ಕೆ ವಾಪಸ್ಸು ಮಾಡಿದ್ದೇನೆ ಅದನ್ನು 2010 ರಲ್ಲಿ ವಾಪಸ್ಸು ಮಾಡಿದ್ದೇನೆ. ನಾನು ಈ ದಾವೆಯಲ್ಲಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ ದಿನದಂದು ವಕೀಲನಾಗಿ ಮಾತ್ರ ಇದ್ದೆ. ವಾದಿರವರು ಸಾಕ್ಷಿಗಾಗಿ ನನ್ನನ್ನು ಕರೆದ ಮೇರೆಗೆ ಬಂದಿರುತ್ತೇನೆ. ನಿಪಿ 1 ರಲ್ಲಿ ಸಿ ವಿ ಅನೀಲ್ ಕುಮಾರ್ ಎಂಬ ಹೆಸರಿನ ಮೇಲೆ ಇರುವ ಸಹಿ ನನ್ನ ಸಹಿಯಾಗಿದೆ.

2. ಕ್ರಯದ ಕರಾರು ಪತ್ರವನ್ನು ಮಾಡಿಕೊಡುವಂತೆ ವಾದಿ ಮತ್ತು ಪ್ರತಿವಾದಿ ಇಬ್ಬರು ನನ್ನ ಬಳಿ ಕೇಳಿದ್ದರು. ಕ್ರಯದ ಕರಾರು ದಿ. 27-10-2016 ರಂದು ಆಗಿದ್ದು ಹಾಗೂ ಅದೇ ದಿನ ಬಂದು ಕೇಳಿದ್ದರು, ಅದಕ್ಕೂ ಮೊದಲು ಅವರು ಬೇಟಿ ಮಾಡಿರಲಿಲ್ಲ. ಅವರುಗಳ ನಡುವೆ ಮಾತುಕತೆಯು ನನ್ನ ಸಮಕ್ಷಮ ಆಗಿಲ್ಲ. ನನಗೆ ಪತ್ರಬರವಣಿಗೆ ಮಾಡುವ ಸಲುವಾಗಿ ಇಬ್ಬರು ಪಕ್ಷಗಾರರ ಆಧಾರ್ ಕಾರ್ಡ್ ಮತ್ತು ಸೊತ್ತಿನ ಪಹಣಿಯನ್ನು ಕೊಟ್ಟಿದ್ದರು. ನಿಪಿ-1 ರ ಸೊತ್ತಿನ ವಿವರ ಎಂಬ ಭಾಗದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಲಯ ಚಿಕ್ಕಬಳ್ಳಾಪುರರವರಿಂದ ಸಂ.ಎಎಲ್ಎನ್. ಎಸ್.ಆರ್. (ಶಿ) ಸಕಾಲ 277/2012-13 ಎಂದು ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿ. ಆ ರೀತಿ ನಮೂದು ಆಗಿರುವ ಬಗ್ಗೆ ದಾಖಲಾತಿಗಳನ್ನು

ನೋಡಿದೆ. ಆ ರೀತಿ ಭೂಪರಿವರ್ತನೆ ಆದೇಶವಾಗಿದ್ದರೂ ಕೂಡ ಸೊತ್ತಿನ ವಿವರದಲ್ಲಿ ಸೈಟುಗಳ ವಿವರಣೆ ಅಥವಾ ವಿಸ್ತೀರ್ಣ ಯಾಕೆ ಕಾಣಿಸಿಲ್ಲ ಎಂದರೆ ಸಾಕ್ಷಿ ಪಕ್ಷಗಾರರು ಆ ಬಗ್ಗೆ ಏನು ದಾಖಲೆ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಭೂಪರಿವರ್ತನೆಯಾಗಿರುವ ಜಮೀನು ವ್ಯವಸಾಯದ ಜಮೀನು ಆಗಿಲ್ಲ ಹಾಗಾಗಿ ಅದನ್ನು ಎಕರೆಯ ಸ್ವರೂಪದಲ್ಲಿ ದಾಖಲೆಗೆ ನಮೂದು ಮಾಡಲು ಆಗುವುದಿಲ್ಲ ಎಂಬ ವಿಚಾರವನ್ನು ನಾನು ಪಕ್ಷಗಾರರಿಗೆ ಹೇಳಿಲ್ಲ. 2016ರ ಸಾಲಿನಲ್ಲಿ ದಾವಾ ಸೊತ್ತಿನ ಪ್ರದೇಶದಲ್ಲಿ ಪ್ರತಿ ಎಕರೆಗೆ ಎಷ್ಟು ಸಬ್ ರಿಜಿಸ್ಟರ್ ಮೌಲ್ಯ ನಿಗದಿಯಾಗಿತ್ತು ಎಂದರೆ ಗೊತ್ತಿಲ್ಲ. ಒಮ್ಮೆ ಜಮೀನಿನ ಭೂಪರಿವರ್ತನೆ ಆದೇಶ ಆದ ಮೇಲೆ ಅದನ್ನು ಗುಂಟೆ ಲೆಕ್ಕದಲ್ಲಿ ಮಾರಟಕ್ಕೆ ಕಾಣಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಆದರೆ ಕ್ರಯದ ಕರಾರು ಮಾಡಬಹುದು ಎಂದು ನುಡಿಯುತ್ತಾರೆ. ಆ ಪ್ರದೇಶದಲ್ಲಿ 2016ರ ಸಾಲಿನಲ್ಲಿ 30X40 ವಿಸ್ತೀರ್ಣದ ಬೆಲೆ ಎಷ್ಟು ಇತ್ತು ಗೊತ್ತಿಲ್ಲ. 2016ರ ಸಾಲಿನ ಎಸ್ ಆರ್ ವ್ಯಾಲು ಸಂಬಂಧ ದಾಖಲೆಯನ್ನು ನಾನು ನೋಡಿ ನಿಪಿ-1 ರ ಬರವಣಿಗೆಯನ್ನು ಮಾಡಿರುತ್ತೇನೆ. ನಾನು ಆ ರೀತಿ ಎಸ್ ಆರ್ ವ್ಯಾಲುವನ್ನು ದಾಖಲೆ ನೋಡದೆ ನಿಪಿ-1 ರ ಬರವಣಿಗೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಕ್ಷಗಾರರು ನನ್ನ ಸಮಕ್ಷಮ ಹಣವನ್ನು ಕೊಟ್ಟಿರಲಿಲ್ಲ. ಸಬ್ ರಿಜಿಸ್ಟರ್ ಸಮಕ್ಷಮ ಪಕ್ಷಗಾರರು ಹಣವನ್ನು ಕೊಟ್ಟಿದ್ದು ನಾನು ನೋಡಿಲ್ಲ. ಸದರಿ ಪತ್ರಕ್ಕೆ ಇಬ್ಬರು ಸಾಕ್ಷಿಗಳಾಗಿ ಸಹಿಯನ್ನು ಮಾಡಿದ್ದಾರೆ, ಅವರುಗಳೆಂದರೆ ಮಲ್ಲಪ್ಪ ಮತ್ತು ರಾಮಸ್ವಾಮಿಯಾಗಿದ್ದಾರೆ. ಅವರನ್ನು ಪಕ್ಷಗಾರರೇ ಕರೆದುಕೊಂಡು ಬಂದಿದ್ದರು. ನಿಪಿ-1 ಪತ್ರಕ್ಕೆ ಗಣಕೀಕೃತವನ್ನು ನಾನೇ ಮಾಡಿದ್ದೆ. ಪಕ್ಷಗಾರರ ಸಹಿಗಳನ್ನು ಮತ್ತು

ಸಾಕ್ಷಿಗಳ ಸಹಿಯನ್ನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ಅದಕ್ಕೆ ಪಡೆದೆ. ಪತ್ರದ ಪಕ್ಷಗಾರರು ಸರ್ಕಾರಕ್ಕೆ ಸ್ಟ್ಯಾಂಪ್ ಡ್ಯೂಟಿ ಹಣವನ್ನು ತಪ್ಪಿಸಲು ಕಡಿಮೆ ಮೊತ್ತಕ್ಕೆ ವ್ಯವಹಾರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ನಿಡಿ-1 ದಾಖಲೆಯನ್ನು ತೋರಿಸಿ ಅದನ್ನು ನಾನು ಪತ್ರ ಬರವಣಿಗೆ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರ ಬಗ್ಗೆ ವಾದಿ ನಿಪಿ-1 ರ ಪತ್ರ ಬರವಣಿಗೆ ಕಾಲದಲ್ಲಿ ಹೇಳಿರುವ ಕುರಿತು ನನಗೆ ನೆನಪಿಲ್ಲ. ನಿಡಿ-1 ಮತ್ತು ನಿಪಿ-1 ಪತ್ರಗಳ ಗಣಕೀಕೃತವು ಒಂದೇ ಕಂಪ್ಯೂಟರ್ ಮೂಲಕ ಆಗಿರಬಹುದು. ನಿಡಿ-1 ನ್ನು ನಮ್ಮ ಕಚೇರಿಯಲ್ಲಿ ಯಾವ ಆಪರೇಟರ್ ಮಾಡಿರಬಹುದು ಗೊತ್ತಿಲ್ಲ. ನಾನು ವಾದಿಯೊಂದಿಗೆ ಶಾಮಿಲಾಗಿ ನಿಪಿ-1 ಕರಾರು ಪತ್ರವನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತುಕೇಳಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಹಾಗೂ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.